ದಿನಾಂಕಃ 30.06.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ.ಬಿ.ಜಿ.ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.

ಚೇಕ್ ದಿನಾಂಕ 20.10.2016 ರ ಚೇಕ್ ಸಂಖ್ಯೆ 078038 ರ ದೃಡೀಕೃತ ನಕಲನ್ನು ನಿಪಿ 1 ಎಂದು ಹಾಗೂ ಅದರಲ್ಲಿರುವ ಪ್ರತಿವಾದಿಯ ಸಹಿಯನ್ನು ನಿಪಿ1 ಎ ಎಂದು, ಎರಡು ಬ್ಯಾಂಕ್ ಮೆಮೋಗಳ ದೃಡೀಕೃತ ನಕಲನ್ನು ನಿಪಿ2 ಹಾಗೂ ನಿಪಿ 3 ಎಂದು, ದಿನಾಂಕ 26.11.2016 ರ ವಕೀಲರ ನೋಟಿಸ್ ಪ್ರತಿಯ ದೃಡೀಕೃತ ನಕಲನ್ನು ನಿಪಿ 4 ಎಂದು, ಅಂಚೆ ರಶೀದಿಯ ದೃಡಿಕೃತ ನಕಲನ್ನು ನಿಪಿ 5 ಎಂದು, ಅಂಚೆ ಕಛೇರಿಯ ಹಿಂಬರಹದ ದೃಡೀಕೃತ ನಕಲನ್ನು ನಿಪಿ6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ